† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೌದು, ಮಾಡಿದೆ. ನುತ್ತ ಮುತ್ತ ಇರುವ ಸ್ಥಳಗಳಲ್ಲಿ ಚದರಗಜಕ್ಕೆ ಎಷ್ಟು ಬೆಲೆ ಇದೆ ಎಂಬುದನ್ನು ನೋಡೇ ಮಾಡಿರುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಈ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳದೆ ರಸ್ತೆ ನೇರ ಗೊಳಿಸಲು ಸಾಧ್ಯವಿರಲಿಲ್ಲವೇ ? ಈಗ ಅನಾವಶ್ಯಕವಾಗಿ ಇದನ್ನು ತೆಗೆದುಕೊಂಡಹಾಗೆ ಆಗಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಖಾಸಗಿ ಜಮೀನು. ಆದುದರಿಂದ ಸರಕಾರದ ವತಕ್ಕೆ ತೆಗೆದುಕೊಳ್ಳದೆ ರಸ್ತೆ ಮಾಡಲು ಅವಕಾಶವಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಸ್ವಲ್ಪ ದೂರ ದಲ್ಲೇ ಟ್ರಸ್ಟ್‌ಬೋರ್ಡ್ ಜಮೀನು ಹರಾಜಾಗಿದೆ, ಅಲ್ಲಿ ಚದರ ಗಜದ ಬೆಲೆ 200-300 ರೂಪಾಯಿಗೆ ಮೇಲೆ ಹೋಗಿಲ್ಲ. ಈಗ ಕೊಟ್ಟಿರೆಯುವುದು ಜಾಸ್ತಿಯಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಬೆಲೆ ಚದರ ಗಜಕ್ಕೆ 100 ರೂಪಾಯಿ ಇದೆ. ರಾಜ ಭವನದ ಹತ್ತಿರ ಒಂದು ಕಟ್ಟಡ ತೆಗೆದುಕೊಂಡಾಗ ಆ ಪ್ರದೇಶದಲ್ಲಿ ಚದರಗಜಕ್ಕೆ 125 ರೂಪಾಯಿ ನಂತೆ ಕೊಟ್ಟಿದ್ದಾರೆ. ಸದಾಶಿವನಗರದಲ್ಲಿ ಇನ್ನೂ ಹೆಚ್ಚು ಬೆಲೆಯಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ನಿವೇಷನವನ್ನು ಸ್ವಾಧೀನಪಡಿಸಿಕೊಂಡಿರುವುದು ಕೇವಲ ಮಾಜಿ ಮಹಾರಾಜರಿಗೆ ಸಹಾಯಮಾಡಬೇಕು ಎಂಬ ಉದ್ದೇಶದಿಂದಲೇ ಹೊರತು ಸಾರ್ವಜನಿಕ ಉದ್ದೇಶದಿಂದಲ್ಲ ಎಂಬುದು ಗಮನಕ್ಕೆ ಬಂದಿದೆಯೇ ? ಆದುದರಿಂದ ಇದನ್ನು ಕೈಬಿಡುವರೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಬಹಳ ಹತ್ತಿರದಲ್ಲಿದೆ, ಮಾನ್ಯ ಸದಸ್ಯರು ಹೋಗಿ ನೋಡಬಹುದು, ರೈಲ್ವೆ ಅಂಡರ್‌ಬ್ರಿಡ್ಜ್ ಹತ್ತಿರ ನೇರವಾಗಿ ರಸ್ತೆಮಾಡಬೇಕಾಯ್ತು. ಆ ಉದ್ದೇಶ ದಿಂದ ತೆಗೆದುಕೊಳ್ಳಲಾಯಿತು. ಸಾರ್ವಜನಿಕ ಉಪಯೋಗಕ್ಕೆ ಬೇಕಾದಾಗ ಯಾರ ಜಮೀನು ಎಂದು ನೋಡದೆ ಏತಕ್ಕೆ ಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟು ತೆಗೆದುಕೊಳ್ಳಲಾಗುವುದು, ಆ ರೀತಿ ಮಾಡಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ಕೊಟ್ಟಿರುವ ಬೆಲೆ ಸಾಲದು ಹೆಚ್ಚಾಗಿ ಕೊಡಬೇಕು ಎಂದು ಕೇಳಿದ್ದರೆ ಕೊಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಜಮೀನು ಎಷ್ಟು ಬಾಳಬಹುದು ಎಂದು ಅಂದಾಜು ಮಾಡಿ ಬೆಲೆ ಕೊಡರಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹೀಗೆ ಬೆಂಗಳೂರು ನಗರದಲ್ಲಿ ಅಥವ ಬೇರೆ ಕಡೆ ಅಂಕ ಡೊಂಕು ರಸ್ತೆ ಇದ್ದರೆ ಅದನ್ನು ನೇರ ಮಾಡಲು ಭೂಮಿ ತೆಗೆದುಕೊಳ್ಳುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಂದರ್ಭ ನೋಡಿ ಅತ್ಯಾವಶ್ಯಕವಾದಾಗ ಮಾಡಬೇಕಾಗುತ್ತದೆ.

Applications Received for old-age pension in Mysore District

528. Sri R. RACHE GOWDA (Hanur).—

Will the Minister for Finance be pleased to state :—

(*a*) the nuber of applications received in Mysore District during the last one year for old age pension ;

(*b*) the number of them sanctioned ;

(*c*) the number of applications received in Kollegal taluk for old-age pension and number of them sanctioned (The names of the persons who have been sanctioned old-age pension and their villages may be furnished) ?

†Indicates that the remarks or speeches have not been revised by the member concerne

Sri M. Y. GHORPADE (Minister for Finance),—

(*a*) In all 2,565 applications have been received.

(*b*) In all 538 persons have been sanctioned with old-age pension.

(*c*) In all 979 applications have received since the old age pension scheme came into force. Out of them old-age pension have been sanctioned for 15 persons.

(Their names and Villages are furnished in the Statement placed on the Tabel of the House) *

ಶ್ರೀ ಆರ್. ರಾಚೇಗೌಡ,—ಮೈಸೂರು ಜಿಲ್ಲೆಯಲ್ಲಿ ಇತ್ಯರ್ಥವಾಗದೆ ಉಳಿದಿರುವ ಅರ್ಜಿಗಳವರಿಗೆ ವೃದ್ಧಾಪ್ಯವೇತನ ಮಂಜೂರು ಮಾಡಲು ಎಷ್ಟು ದಿವಸ ಬೇಕು ?

† ಶ್ರೀ ಎಂ. ವೈ. ಘೋರ್ಪಡೆ.— ಮೊದಲು ಮಂಜೂರು ಮಾಡುವ ಅಧಿಕಾರ ತಹಸೀಲ್ದಾರರಿಗೆ ಕೊಟ್ಟಿತ್ತು. ತಡ ಆಗಬಾರದು ಎಂಬ ಉದ್ದೇಶದಿಂದ ಸಕ್ಕೂರ್ಲರ್ ಕಳುಹಿಸಿ ಮಂಜೂರು ಮಾಡಲು ಡೆಪ್ಯೂಟಿ ಕಮಿಷಿನರ್ ಅವರಿಗೆ ಅಧಿಕಾರ ಕೊಡಲಾಗಿದೆ. ತಡಮಾಡದೆ ಈ ಕೆಲಸಮಾಡಬೇಕೆಂದು ಸ್ಪಷ್ಟವಾಗಿ ಅವರಿಗೆ ಹೇಳಿದ್ದೇವೆ. ಸಾಧ್ಯವಿರುವಷ್ಟು ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದೆ.

ಶ್ರೀ ಆರ್. ರಾಚೇಗೌಡ.—ಬಂದ ಅರ್ಜಿಗಳಲ್ಲಿ ರಿಜೆಕ್ಟ್ ಆಗಿರುವುದೆಷ್ಟು ? ಎಷ್ಟು ಮಂಜೂರಾಗಿವೆ ಎಂಬುದನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ತಿಳಿಸುವಿರಾ ?

ಶ್ರೀ ಎಂ. ವೈ. ಘೋರ್ಪಡೆ,—ನನ್ನ ಕಡೆ ಇರುವ ಅಂಕಿಅಂಶಗಳ ಪ್ರಕಾರ 31-3-1973ರ ವರೆಗೆ ಇಡೀ ರಾಜ್ಯದಲ್ಲಿ 28 ಸಾವಿರ ಅರ್ಜಿಗಳು ನಮಗೆ ಬಂದಿದ್ದುವು, ಅವುಗಳಲ್ಲಿ 15 ಸಾವಿರ ಮಂಜೂರಾಗಿವೆ. ಮೈಸೂರು ಜಿಲ್ಲೆಯಲ್ಲಿ 2750 ಅರ್ಜಿ ಬಂದು 1620 ಮಂಜೂರಾಗಿವೆ, 950 ರಿಜಿಕ್ಟ್ ಆಗಿವೆ, 180 ಪೆಂಡಿಂಗ್ ಇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅರ್ಜಿ ಕೊಟ್ಟ 6 ತಿಂಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು, ಏರೆ ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸುವಿರಾ ?

ಶ್ರೀ ಎಂ. ವೈ. ಘೋರ್ಪಡೆ.—ಈಗ 28 ಸಾವಿರ ಅರ್ಜಿಗಳು ಬಂದು 15 ಸಾವಿರ ಮಂಜೂರಾಗಿವೆ, 6 ಸಾವಿರ ರಿಜೆಕ್ಟ ಆಗಿವೆ. ಕಾರಣ ಕಾನೂನು ಪ್ರಕಾರ ಕೊಡಲು ಆಗುವುದಿಲ್ಲ ಎಂಬುದು ಪೆಂಡಿಂಗ್ ಇರುವುದು 6 ಸಾವಿರ. 28 ಸಾವಿರದಲ್ಲಿ 6 ಸಾವಿರ ಪೆಂಡಿಂಗ್ ಇದೆ ಎಂದರೆ ಇದರಿಂದ ಸಾಕಷ್ಟು ಪ್ರಮಾಣದಲ್ಲಿ ಕೆಲಸವಾಗಿದೆಯೆಂಬುದು ಅರ್ಥವಾಗುವುದು. ಹಾಗಾಗದಿದ್ದರೆ ಪೆಂಡಿಂಗ್ ಜಾಸ್ತಿ ಇರುತ್ತಿತ್ತು. ಡೆಪ್ಯೂಟಿಕಮಿಷನರು ಇದರ ಬಗ್ಗೆ ಅನಕ್ಕಯಿಂದ ಕೆಲಸಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ವೃದ್ಧಾಪ್ಯ ವೇತನ ಶೀಘ್ರವಾಗಿ ಸಿಕ್ಕಬೇಕಾದರೆ ತಹಸೀಲ್ದಾರರಿಗೆ ಅಧಿಕಾರ ಕೊಡುವುದು ಉಚಿತವಲ್ಲವೇ ? ಅವರಿಗೆ ಗೈಡ್ ಲೈನ್ ಕೊಟ್ಟರೆ ಅನುಕೂಲ. ಜಿಲ್ಲಾಧಿಕಾರಿಗಳಿಂದ ಮಂಜೂರಾಗುವುದು ತಡವಾಗುವುದು. ತಹಸೀಲ್ದಾರರಿಗೆ ಅಧಿಕಾರ ಕೊಟ್ಟರೆ ಬೇಗ ಪಡೆಯಲು ಸಾಧ್ಯವಾಗುವುದು.

ಶ್ರೀ ಎಂ. ವೈ. ಘೋರ್ಪಡೆ.—ಈಗಿರುವ ರೂಲ್ಸ್ ಪ್ರಕಾರ ತಹಸೀಲ್ದಾರರು ವೆರಿಫೈ ಮಾಡಿ ಶಿಫಾರಸು ಮಾಡಬೇಕು. ಅದಾದನಂತರ ರೂಲ್ಸ್ ಪ್ರಕಾರ ಕೊಡಬಹುದು ಎಂದು ಹೇಳಿದರೆ ಡೆಪ್ಯೂಟಿಕಮೀಷನರು ಮಂಜೂರು ಮಾಡುವುದು ತಡವಾಗುವುದಿಲ್ಲ.

Sri KAGODU THIMMAPPA.—The same power can be exercised by the Tahasildar.

---

* Copy placed in the Mysore Legislate Library vide No. 30/12-4-1973

Sri M. Y. GHORPADE.—After all within two days the Deputy Commissioner will sanction it. ಇದನ್ನು ಬಹಳ ಜವಾಬ್ದಾರಿಯಿಂದ ಮಾಡ ಬೇಕಾಗುತ್ತದೆ. ವೆರಿಫೈ ಮಾಡುವ ಕೆಲಸ ತಹಾಸೀಲ್ದಾರರ ಕಡೆ ಇದೆ. ಪಾರ್ಮರ್ ಸ್ಯಾಂ ನ್‌ಗೆ ಡೆಪ್ಯೂಟಿ ಕಮಿಷನರ್ ಅವರಿಗೆ ಹೋಗುತ್ತದೆ. ಇದನು ಸಂಬಂಧಪಟ್ಟ ತಹಾಸೀಲ್ದಾರರು ಮಾಡುತ್ತಾ ಇದ್ದಾರೆ. ಡೆಪ್ಯೂಟಿ ಕಮಿಷನರ್ ಅವರಿಗೆ ಇದನ್ನು ಕಳುಹಿಸಿದ ತಕ್ಷಣ ಅವರು ಮಂಜುರು ಮಾಡುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ವೃದ್ಧಾಪ್ಯವೇತನ ಕೊಡತಕ್ಕ ಕಾಲದಲ್ಲಿ ತಾವು ಅನುಸರಿಸತಕ್ಕ ನಿಯಮಗಳು ಯಾವುವು; ಯಾವ ಷರತ್ತುಗಳನ್ನು ಪೂರೈಸಿದರೆ ಪೆನ್‌ಷನ್ ಅನ್ನು ಜಾಗ್ರತೆಯಾಗಿ ಕೊಡುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ತಮಗೆ ಗೊತ್ತಿರುವಂತೆ ವೃದ್ಧಾಪ್ಯವೇತನ ಕೊಡುವುದಕ್ಕೆ 65 ವರ್ಷಗಳಾಗಿರಬೇಕು. ಹಿಂದೆ 70 ವರ್ಷ ಇದ್ದುದನ್ನು ಈಗ 65 ವರ್ಷಕ್ಕೆ ಇಳಿಸಿದ್ದೇವೆ. ಅದರಲ್ಲಿ ಏನಾದರೂ ಡೆಸ್ಟಿಟ್ಯೂಟ್ಸ್ ಇದ್ದರೆ, ಕೈತಕಾಲು ಇಲ್ಲ, ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಪಕ್ಷದಲ್ಲಿ 60ವರ್ಷ ಇದ್ದರೂ ಸಾಕು, ಅದರ ಜೊತೆಗೆ ಬೇರೆ ವರಮಾನ ಇರಕೂಡದು. ಅವರು ಮೂರು ವರ್ಷ ನಮ್ಮ ರಾಜ್ಯದಲ್ಲಿದ್ದವರಾಗಿರಬೇಕಾಗುತ್ತದೆ. ಅವರನ್ನು ನೋಡಿಕೊಳ್ಳಲಿಕ್ಕೆ ಮಗ ಅಥವಾ ಇನ್ನಾವ ಆಪ್ತರು ಇರಬಾರದು. ಅವರು ಇದ್ದರೆ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಹಂಜಿ ಶಿವಣ್ಣ.—ಜಿಲ್ಲಾಧಿಕಾರಿಗಳು ಇದನ್ನು ಮಂಜೂರು ಮಾಡಿ ಕೊಡುವುದಕ್ಕೆ ಏನು ತೊಂದರೆಯಾಗುತ್ತದೆ? ಈಚೆಗೆ ಇದರಲ್ಲಿ ಗುಮಾಸ್ತರ ಕೈವಾಡ ಜಾಸ್ತಿಯಾಗಿ, ಅವರು 6-8 ತಿಂಗಳವರೆಗೆ ಫೈಲುಗಳನ್ನು ಮುಂದಕ್ಕೆ ಕಳುಹಿಸುವುದಿಲ್ಲ, ಆದ್ದರಿಂದ ಇದಕ್ಕೆ ತಾವು ಏನಾದರೂ ಕಾಲ ನಿಗದಿ ಮಾಡಿ, ಇಷ್ಟು ದಿವಸದಲ್ಲಿ ಪೆನ್‌ಷನ್ ಕೊಡುವುದಕ್ಕೆ ಸಾಧ್ಯ, ಇಲ್ಲದಿದ್ದರೆ, ಮಜಾ ಮಾಡಿದ್ದೇವೆ ಎಂದು ಜಿಲ್ಲಾಧಿಕಾರಿಗಳು ತಿಳಿಸುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಶ್ರೀ ಎಂ. ವೈ. ಘೋರ್ಪಡೆ.—ಹಾಗೆ ತಡ ಮಾಡಬೇಕು ಎನ್ನುವ ಅಪೇಕ್ಷೆ ಆಲ್ಲ, ಜನತಾ ಪ್ರತಿನಿಧಿಗಳು ಇದರಲ್ಲಿ ಸ್ವಲ್ಪ ಆಸಕ್ತಿ ವಹಿಸಿ ಗ್ರಾಮದಲ್ಲಿರುವ ಪಟ್ಟಿ ನೋಡಿ ಅವರು ತಹಸೀಲ್ದಾರ್ ಅವರಿಗೆ ಹೇಳಬೇಕಾಗುತ್ತದೆ. ಇಷ್ಟು ಇದೆ, ಬೇಗ ಕಳುಹಿಸಿ ಎಂದು ಅವರಿಗೆ ಹೇಳಬೇಕಾಗುತ್ತದೆ. ಗುಮಾಸ್ತರ ಮೇಲೆ ಇದನ್ನು ಬಿಡುವುದಕ್ಕೆ ಆಗುವುದಿಲ್ಲ. ಕೊಳ್ಳೆಗಾಲ ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮದಲ್ಲಿ ಎಷ್ಟೆಷ್ಟು ವೃದ್ಧಾಪ್ಯವೇತನ ಕೊಟ್ಟಿದ್ದೇವೆ ಎಂದು ವಿವರ ನನ್ನ ಕಡೆ ಇದೆ. ಆ ತಾಲ್ಲೂಕಿನಲ್ಲಿ 152 ಗ್ರಾಮಗಳಲ್ಲಿ ಒಬ್ಬೊಬ್ಬರಿಗೆ ಪೆನ್‌ಷನ್ ಸಿಕ್ಕಿದೆ. ಇದನ್ನು ನೋಡಿದರೆ ಇರುವ ಪರಿಸ್ಥಿತಿಯಲ್ಲಿ ಇದು ಸಮಾಧಾನಕರವಾಗಿದೆ ಎಂದು ಅನ್ನಿಸುತ್ತದೆ.

Fish Rearing in Hassan District

563. Sri K. H. HANUME GOWDA (Hassan).—

Will the Minister of State for Fisheries be pleased to state :—

(*a*) the extent of land in Major and Minor tank beds of Hassan district wherein fish can be reared and the number of fingerlings (fish) required per annum for this purpose (Talukwise figures may be furnished) ;

(*b*) the number of fingerlings supplied by the concerned department per annum during the last 3 years (Talukwise information may be furnished) ;

(*c*) the number of fingerlings produced per annum in Gorur Regional fish farm during the last 3 years ;